SA – 405

**II ಸೆಮಿಸ್ಟರ್ ಬಿ.ಸಿ.ಎ. ಪರೀಕ್ಷೆ, ಏಪ್ರಿಲ್/ಮೇ 2015**
**(CBCS) ( ಫ್ರೆಷರ್ಸ್ ) (2014-15 and Onwards)**
**ಕನ್ನಡ ಭಾಷಾ ಪತ್ರಿಕೆ - II**
**ಸುವರ್ಣ ಸಂಪದ ಮತ್ತು ಶ್ಮಶಾನ ಕುರುಕ್ಷೇತ್ರ**

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 70

I. ಅ) ಈ ಪದ್ಯದ ಭಾವಾರ್ಥವನ್ನು ಬರೆಯಿರಿ : **(1×6=6)**

ಅವರು ನಮ್ಮ ರೊಟ್ಟಿ ನಿದ್ರೆ
ಮತ್ತು ನಗೆಯನ್ನು ಕದ್ದದ್ದಕ್ಕೆ
ಒಂದು ಸಲ ನಾವು ಆ ಮೇಲಿನವನ
ಅದಾಲತ್ತಿನಲ್ಲಿ ನ್ಯಾಯ ಕೇಳೋಣ
ಆದರೆ, ಸದ್ಯದ ಸ್ಥಿತಿ ಹೇಗಿದೆ
ನೋಡು,
ಅವರು ಕದಿಯಬೇಕೆಂದರೂ
ನಮ್ಮ ಬಳಿ ಏನೂ ಉಳಿದಿಲ್ಲ!

ಆ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ. **(2×2=4)**

1) ವಿಭಾ
2) ನಿಸಾರ್ ಅಹಮದ್
3) ಕುವೆಂಪು
4) ಜೀತಗಾರ.

ಇ) ಒಂದು ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ. **(1×10=10)**

1) ತಾಯಿಯೊಬ್ಬಳ ದುಸ್ಥಿತಿ, ಮಗಳ ದುಃಖವಾಗಿ ಕಾಡುವ ಬಗೆ.
2) ಅಸ್ಪೃಶ್ಯತೆಯ ಅಮಾನವೀಯತೆ ಮೂಡ್ನಾಕೂಡು ಚಿನ್ನಸ್ವಾಮಿಯವರ ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ ?

II. ಅ) **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ. **(2×5=10)**

1) ಗೀರ್ವಾಣ–ನೀಲಾಕ್ಷರು ತಮ್ಮ ಒಡೆಯನ ಬಗ್ಗೆ ತೋರುವ ನಿಷ್ಠೆ ಎಂತಹುದು ?

2) ಕರ್ಣನನ್ನು ಕಳೆದುಕೊಂಡ ಕುಂತಿಯ ಸಂಕಟ.

3) ಮುದುಕಿ–ಮಾತೆಯರ ನಡುವಿನ ಸಂಭಾಷಣೆ.

ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1×10=10)**

1) 'ಅಧಿಕಾರ, ಸಂಬಂಧಗಳನ್ನೇ ಸರ್ವನಾಶ ಮಾಡುತ್ತದೆ'– 'ಸ್ಮಶಾನ ಕುರುಕ್ಷೇತ್ರ' ನಾಟಕದ ಹಿನ್ನೆಲೆಯಲ್ಲಿ ಬರೆಯಿರಿ.

2) ರುದ್ರ ಮತ್ತು ಕೃಷ್ಣರ ಸಂಭಾಷಣೆಯಲ್ಲಿ ಮೂಡುವ ''ಕಲಿಯುಗ ಮಹಾಕಾವ್ಯಂ'' ಕನಸನ್ನು ಪರಿಚಯಿಸಿ.

III. ಅ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(1×5=5)**

1) ಜಾಹೀರಾತಿಗೂ ಮಹಿಳೆಗೂ ಇರುವ ಸಂಬಂಧವೆಂಥದು ?

2) ಬೋನು ಮತ್ತು ಗಾಡ್ಲಿಯ ಪೇಚಾಟದ ಸನ್ನಿವೇಶ.

ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1×10=10)**

1) ಗಾಡ್ಲಿಯ ಜೀವನೋಪಾಯದ ಮಾರ್ಗಗಳು ಮತ್ತು ಅವುಗಳ ವಿಫಲತೆಯನ್ನು ಕುರಿತು ಬರೆಯಿರಿ.

2) ಜಾತಿ ಪದ್ಧತಿಯನ್ನು ಕುರಿತಂತೆ ಅಂಬೇಡ್ಕರ್ ಹಾಗೂ ಗಾಂಧೀಜಿಯವರ ವಿಚಾರಗಳೇನು ? ವಿವರಿಸಿ.

IV. ಅ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(1×5=5)**

1) ಕಂಪ್ಯೂಟರಿನಲ್ಲಿ ಬಳಕೆಯಾಗಬೇಕಾದ ಕನ್ನಡದ ಸಾಧ್ಯತೆಗಳನ್ನು ಕುರಿತು ಬರೆಯಿರಿ.

2) ಲೂಸಿಯಾ ಸಿನೆಮಾ ಕುರಿತು ಲೇಖಕರ ಅಭಿಪ್ರಾಯ.

ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1×10=10)**

1) 'ಸಿನೆಮಾ ಮಾಧ್ಯಮವನ್ನು ಯುವಜನರು ಸದುಪಯೋಗಪಡಿಸಿಕೊಳ್ಳಲು ಸಾಧ್ಯ'. ಹೌದೆ ? ಚರ್ಚಿಸಿ.

2) 'ಶಕುಂತಲಾದೇವಿ ಬಹುಮುಖ ಪ್ರತಿಭೆಯ ಕನ್ನಡತಿ'– ವಿವರಿಸಿ.

---